ತಂತಿ ವಿಳಾಸ: ಯೂನಿರೆಜ್
ದೂರವಾಣಿ ಸಂಖ್ಯೆ: 2419677/2419361
ಫ್ಯಾಕ್ಸ್: 0821-2419363/2419301

e-mail: registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್‌ಭವನ, ಮೈಸೂರು
ದಿನಾಂಕ 26.07.2021

ಸಂಖ್ಯೆ:ಜಿಎಲ್5/172/2018-19

## ಸುತ್ತೋಲೆ

ವಿಷಯ: **"ಸಂಸ್ಥಾಪನಾ ದಿನಾಚರಣೆ"** ಸಮಾರಂಭವನ್ನು ಆಚರಿಸುವ ಬಗ್ಗೆ
ಉಲ್ಲೇಖ: ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರ ಟಿಪ್ಪಣಿ
ಸಂಖ್ಯೆ: ಕುಪ/ಇತರೆ/2021-22, ದಿನಾಂಕ: 16.07.2021

-:-

ವಿಶ್ವವಿದ್ಯಾನಿಲಯದ ವತಿಯಿಂದ ದಿನಾಂಕ 27-07-2021 ರಂದು ಬೆಳಗ್ಗೆ 11.30 ಗಂಟೆಗೆ ಕ್ರಾಫರ್ಡ್ ಭವನದ ಸಭಾಂಗಣದಲ್ಲಿ **"ಸಂಸ್ಥಾಪನಾ ದಿನಾಚರಣೆ"** ಸಮಾರಂಭವನ್ನು ಏರ್ಪಡಿಸಲಾಗಿದೆ. ಈ ಸಮಾರಂಭದ ಮುಖ್ಯ ಅತಿಥಿಯಾಗಿ **ಪ್ರೊ. ಎಸ್. ಅಯ್ಯಪ್ಪನ್**, ಅಧ್ಯಕ್ಷರು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಮತ್ತು ಕುಲಾಧಿಪತಿಗಳು, ಕೇಂದ್ರಿಯ ಕೃಷಿ ವಿಶ್ವವಿದ್ಯಾಲಯ, ಇಂಫಾಲ್ ಇವರು ಭಾಗವಹಿಸಲಿದ್ದಾರೆ ಹಾಗೂ **ಡಾ.ಸುಧಾಮೂರ್ತಿ**, ಸಂಸ್ಥಾಪಕರು, ಇನ್ಫೋಸಿಸ್ ಪ್ರತಿಷ್ಠಾನ, ಬೆಂಗಳೂರು ಇವರು **"ನಮ್ಮ ಶಿಕ್ಷಣ ಪದ್ಧತಿ ನಮಗೆ ಕಲಿಸದ ಆದರೆ ನಮ್ಮ ಬದುಕಿಗೆ ಇದು ಅತ್ಯಗತ್ಯವಾಗಿ ಬೇಕಾದ ಸಂಗತಿ ಕುರಿತು"** ಸಂಸ್ಥಾಪನಾ ದಿನದ ಉಪನ್ಯಾಸವನ್ನು ಆನ್‌ಲೈನ್ ಮೂಖಾಂತರ ನೀಡಲಿದ್ದಾರೆ. ಮಾನ್ಯ ಕುಲಪತಿಯವರಾದ **ಪ್ರೊ. ಜಿ.ಹೇಮಂತ್ ಕುಮಾರ್** ರವರು ಈ ಸಮಾರಂಭದ ಅಧ್ಯಕ್ಷತೆ ವಹಿಸುವರು.

ಈ ಹಿನ್ನೆಲೆಯಲ್ಲಿ ಕೋವಿಡ್-19 ನಿಮಿತ್ತ ಕರ್ನಾಟಕ ಸರ್ಕಾರದ ಆದೇಶದಂತೆ ಯಾವುದೇ ಸಮಾರಂಭಗಳಿಗೆ 100 ಜನರಿಗೆ ಮಾತ್ರ ಭಾಗವಹಿಸಲು ಅನುಮತಿ ಇರುವುದರಿಂದ ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕೋತ್ತರ ವಿಭಾಗದ ಅಧ್ಯಕ್ಷರುಗಳು ಹಾಗೂ ಬಟವಾಡೆ ಅಧಿಕಾರಿಗಳು ಮಾತ್ರವೇ ಕಡ್ಡಾಯವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಕೋರಲಾಗಿದೆ. ಉಳಿದವರೆಲ್ಲರೂ ವಿಶ್ವವಿದ್ಯಾನಿಲಯದ ಅಧಿಕೃತ **UOM Live youtube Channel** ಮತ್ತು **Facebook page** ನಲ್ಲಿ ಕಾರ್ಯಕ್ರಮವನ್ನು ವೀಕ್ಷಿಸಬಹುದಾಗಿದೆ.

**ಕುಲಸಚಿವ**

**ಇವರಿಗೆ,**

1. ಅಧ್ಯಕ್ಷರು/ನಿರ್ದೇಶಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಮಾ.ಗಂ., ಮೈಸೂರು.
2. ಎಲ್ಲಾ ಬಟವಾಡೆ ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ ಹಾಸನ/ಮಂಡ್ಯ ಮತ್ತು ಚಾಮರಾಜನಗರ.
4. ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟ ಕಾಲೇಜುಗಳ ಪ್ರಾಂಶುಪಾಲರು, ಮೈವಿವಿ, ಮೈಸೂರು
5. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ಎಲ್ಲಾ ಉಪಕುಲಸಚಿವ/ಸಹಾಯಕ ಕುಲಸಚಿವ/ಅಧೀಕ್ಷಕರು, ಮೈವಿವಿ, ಮೈಸೂರು.
7. ಕುಲಸಚಿವರು (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕುಲಪತಿ /ಕುಲಸಚಿವ /ಕುಲಸಚಿವ (ಪರೀಕ್ಷಾಂಗ) /ಹಣಕಾಸು ಅಧಿಕಾರಿಯವರ ಆಪ್ತಸಹಾಯಕರು, ಮೈವಿವಿ, ಮೈಸೂರು.
9. ಕಛೇರಿ ಪ್ರತಿ.

ಮೈಸೂರು ವಿಶ್ವವಿದ್ಯಾನಿಲಯ

# ಸಂಸ್ಥಾಪನಾ ದಿನಾಚರಣೆ

**ಡಾ. ಸುಧಾ ಮೂರ್ತಿ**

ಸಂಸ್ಥಾಪಕರು, ಇನ್ಫೋಸಿಸ್ ಪ್ರತಿಷ್ಠಾನ

ಬೆಂಗಳೂರು

**ನಮ್ಮ ಶಿಕ್ಷಣ ಪದ್ಧತಿ ನಮಗೆ ಕಲಿಸದ ಆದರೆ ನಮ್ಮ ಬದುಕಿಗೆ ಇದು ಅತ್ಯಗತ್ಯವಾಗಿ ಬೇಕಾದ ಸಂಗತಿ**

ಕುರಿತು ಸಂಸ್ಥಾಪನಾ ದಿನದ ಉಪನ್ಯಾಸವನ್ನು ಆನ್‌ಲೈನ್ ಮುಖಾಂತರ ನೀಡುವರು

ಮುಖ್ಯ ಅತಿಥಿಗಳು

**ಡಾ. ಸಿ.ಎನ್. ಅಶ್ವತ್ಥನಾರಾಯಣ**

ಸನ್ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು

ಕರ್ನಾಟಕ ಸರ್ಕಾರ, ಬೆಂಗಳೂರು

ಗೌರವಾನ್ವಿತ ಅತಿಥಿಗಳು

**ಪ್ರೊ. ಎಸ್. ಅಯ್ಯಪ್ಪನ್**

ಅಧ್ಯಕ್ಷರು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಮತ್ತು ಕುಲಾಧಿಪತಿಗಳು, ಕೇಂದ್ರೀಯ ಕೃಷಿ ವಿಶ್ವವಿದ್ಯಾಲಯ, ಇಂಫಾಲ್

ಅಧ್ಯಕ್ಷತೆ

**ಪ್ರೊ. ಜಿ. ಹೇಮಂತ ಕುಮಾರ್**

ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಸರ್ವರಿಗೂ ಆದರದ ಸ್ವಾಗತ**

ದಿನಾಂಕ: 27-07-2021, ಮಂಗಳವಾರ, ಸಮಯ: ಬೆಳಗ್ಗೆ 11.30 ಗಂಟೆಗೆ

ಸ್ಥಳ: ಕ್ರಾಫರ್ಡ್ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಪ್ರೊ. ಆರ್. ಶಿವಪ್ಪ**

ಕುಲಸಚಿವರು

ಸೂಚನೆ: ಕೊರೊನಾ-19 ನಿಮಿತ್ತ, ಕರ್ನಾಟಕ ಸರ್ಕಾರದ ಆದೇಶದಂತೆ ಯಾವುದೇ ಸಮಾರಂಭಗಳಿಗೆ 100 ಜನರಿಗೆ ಮಾತ್ರ ಭಾಗವಹಿಸಲು ಅನುಮತಿ ಇರುವುದರಿಂದ ಎಲ್ಲರೂ ವಿಶ್ವವಿದ್ಯಾನಿಲಯದ ಅಧಿಕೃತ UOM Live Youtube Channel ಮತ್ತು Facebook page ನಲ್ಲಿ ಕಾರ್ಯಕ್ರಮವನ್ನು ವೀಕ್ಷಿಸಿ ಸಹಕರಿಸುವಂತೆ ಕೋರಲಾಗಿದೆ.

---

UNIVERSITY OF MYSORE

# FOUNDATION DAY

**Dr. Sudha Murty**

Founder, Infosys Foundation

Bengaluru

will deliver Foundation Day Lecture through online on

**"What we do not learn from our Education System but is very essential for our Life"**

Chief Guest

**Dr. C.N. Ashwath Narayan**

Hon'ble Deputy Chief Minister and Minsiter for Higher Education, Govt. of Karnataka

Bengaluru

Guest of Honour

**Prof. S. Ayyappan**

Chairman, Karnataka Science & Technology Academy and Chancellor, Central Agricultural University, Imphal

President

**Prof. G. Hemantha Kumar**

Vice Chancellor

University of Mysore, Mysuru

*All are cordially invited*

Date: 27.07.2021, Tuesday    Time: 11.30 am

Venue: **Crawford Hall**, University of Mysore, Mysuru

**Prof. R. Shivappa**

Registrar

Note: In view of prevailing pandemic situation we need to observe the Government protocal which restricts the entry only to a hundred participants. We request to watch the programme through University official Uomlive Youtube channel and Facebook page

ವಿಜಯವಾಣಿ

28-07-2021, ಬುಧವಾರ

# ವ್ಯವಹಾರಿಕ ಕೌಶಲ ಬೆಳೆಸಿ

## ಇನ್ಫೋಸಿಸ್ ಪ್ರತಿಷ್ಠಾನದ ಸಂಸ್ಥಾಪಕಿ ಡಾ.ಸುಧಾಮೂರ್ತಿ ಸಲಹೆ

■ ವಿಜಯವಾಣಿ ಸುದ್ದಿಜಾಲ ಮೈಸೂರು


ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳಿಗೆ ಬರೀ ಶಿಕ್ಷಣ ಕೊಟ್ಟರೆ ಸಾಲದು. ಅದರೊಂದಿಗೆ ಅವರಿಗೆ ಧೈರ್ಯ, ಆತ್ಮವಿಶ್ವಾಸ ತುಂಬಿ ಕನಿಷ್ಠ ವ್ಯವಹಾರಿಕ ಜ್ಞಾನ ನೀಡಲು ಕ್ರಮ ವಹಿಸಬೇಕು ಎಂದು ಇನ್ಫೋಸಿಸ್ ಪ್ರತಿಷ್ಠಾನದ ಸಂಸ್ಥಾಪಕಿ ಡಾ. ಸುಧಾಮೂರ್ತಿ ಸಲಹೆ ನೀಡಿದರು.

ಮೈಸೂರು ವಿವಿ ಕ್ರಾಫರ್ಡ್ ಭವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ವಿಶ್ವವಿದ್ಯಾಲಯದ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಆನ್‌ಲೈನ್ ಮೂಲಕ 'ನಮ್ಮ ಶಿಕ್ಷಣ ಪದ್ಧತಿ ನಮಗೆ ಕಲಿಸದ ಆದರೆ, ನಮ್ಮ ಬದುಕಿಗೆ ಅಗತ್ಯವಾಗಿ ಬೇಕಾದ ಸಂಗತಿ' ಕುರಿತು ಮಾತನಾಡಿದರು. ಪದವಿ ಪಡೆದು ವಿವಿಗಳಿಂದ ಹೊರ ಬಂದ ಅನೇಕ ವಿದ್ಯಾರ್ಥಿಗಳಲ್ಲಿ ಭಯ, ಆತಂಕವಿದೆ. ಆತ್ಮವಿಶ್ವಾಸದ ಕೊರತೆ ಎದ್ದು ಕಾಣುತ್ತದೆ. ಅವರಿಗೆ ಸಣ್ಣ ಸೋಲನ್ನೂ ಎದುರಿಸುವ ಮನೋಸ್ಥೈರ್ಯವಿಲ್ಲ. ಜೀವನ ನಿರ್ವಹಣೆಗೆ ಮುಖ್ಯವಾಗಿ ಬೇಕಾದ ವ್ಯವಹಾರಿಕ ಜ್ಞಾನವೂ ಇರುವುದಿಲ್ಲ. ಇಂತಹವರು ತಮ್ಮ ಜೀವನವನ್ನು ಕಟ್ಟಿಕೊಳ್ಳಲು ಪರದಾಡುವ ಸ್ಥಿತಿ ಸಾಮಾನ್ಯವಾಗಿದೆ ಎಂದು ಹೇಳಿದರು.

ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳಿಗೆ ಪಠ್ಯಕ್ರಮದೊಂದಿಗೆ ಧೈರ್ಯ, ಆತ್ಮವಿಶ್ವಾಸ ತುಂಬುವ ಕೆಲಸ ಮಾಡಬೇಕು. ಮುಕ್ತ ಮನಸ್ಥಿತಿ ಮೈಗೂಡಿಸಿಕೊಳ್ಳುವಂತೆ ಪ್ರಚೋದಿಸಬೇಕು. ಆದಾಯ, ತೆರಿಗೆ, ಲಾಭ ಮತ್ತು ಹಣದ ನಿರ್ವಹಣೆಗೆ ಸಂಬಂಧಿಸಿದಂತೆ ವ್ಯವಹಾರಿಕ ಜ್ಞಾನ ಹೇಳಿಕೊಡಬೇಕು. ಕ್ರೀಡೆ, ಯೋಗ ಕಲಿಸಬೇಕು. ಇದರಿಂದ ಮಾನಸಿಕ ಮತ್ತು ದೈಹಿಕ ಆರೋಗ್ಯದ ಮೇಲೆ ಉತ್ತಮ ಪರಿಣಾಮ ಬೀರಲಿದೆ ಎಂದು ಸಲಹೆ ನೀಡಿದರು. ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ನಿರ್ಮಾಣವಾದ ಮೈಸೂರು ವಿವಿ ಅವರ ಆಶಯದಂತೆ ನಡೆದುಕೊಂಡು ಬರುತ್ತಿದೆ. ಅವರು ಸಮಾಜಕ್ಕೆ ನೀಡಿದ ಅಪಾರ ಕೊಡುಗೆಗಳಲ್ಲಿ ಮೈಸೂರು ವಿವಿಯೂ ಒಂದಾಗಿದೆ. ಇಂತಹ ಪ್ರತಿಷ್ಠಿತ ವಿವಿಯಲ್ಲಿ ಇನ್ಫೋಸಿಸ್ ಸಂಸ್ಥಾಪಕ ಡಾ.ನಾರಾಯಣ ಮೂರ್ತಿ ಓದಿರುವುದು ನನಗೆ ಹೆಮ್ಮೆ. ಇಲ್ಲದಿದ್ದರೆ ಅವರು ಇನ್ಫೋಸಿಸ್ ಕಟ್ಟುತ್ತಿರಲಿಲ್ಲ. ವಿದ್ಯಾಲಯ ಸಮಾಜಕ್ಕೆ ಅನೇಕ ಮೇರು ವ್ಯಕ್ತಿಗಳನ್ನು ನೀಡಿದೆ ಎಂದು ಬಣ್ಣಿಸಿದರು.

ಇಂಫಾಲ್‌ನ ಕೇಂದ್ರೀಯ ಕೃಷಿ ವಿವಿ ಕುಲಪತಿ ಪ್ರೊ. ಎಸ್.ಅಯ್ಯಪ್ಪನ್ ಮಾತನಾಡಿ, ವಿಶ್ವವಿದ್ಯಾಲಯ ನೂತನ ಶಿಕ್ಷಣ ನೀತಿ ಅಳವಡಿಸಿಕೊಳ್ಳಲು ಎಲ್ಲ ಸಿದ್ಧತೆ ನಡೆಸಿದೆ. ಇದರೊಂದಿಗೆ ಸಂಶೋಧನೆ ಮತ್ತು ಆವಿಷ್ಕಾರಕ್ಕೂ ಹೆಚ್ಚು ಒತ್ತು ನೀಡಬೇಕು. ಪಠ್ಯ ಬೋಧಿಸುವುದು ಬೋಧಕರ ಅಂತಿಮ ಕೆಲಸವಲ್ಲ. ಬೋಧನೆ ಮತ್ತು ಸಂಶೋಧನೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಆದ್ದರಿಂದ ಅಧ್ಯಾಪಕರು ಗುಣಮಟ್ಟದ ಸಂಶೋಧನೆಯಲ್ಲೂ ಸಕ್ರಿಯವಾಗಬೇಕು ಎಂದು ಹೇಳಿದರು.

ಕುಲಸಚಿವ ಪ್ರೊ.ಆರ್.ಶಿವಪ್ಪ, ಪರೀಕ್ಷಾಂಗ ಕುಲಸಚಿವ ಪ್ರೊ.ಎ.ಪಿ. ಜ್ಞಾನಪ್ರಕಾಶ್, ಕೆ-ಸೆಟ್ ಸಂಯೋಜನಾಧಿಕಾರಿ ಪ್ರೊ.ಎಚ್. ರಾಜಶೇಖರ್ ಇನ್ನಿತರರು ಪಾಲ್ಗೊಂಡಿದ್ದರು.





ಮೈಸೂರಿನ ಕ್ರಾಫರ್ಡ್ ಭವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಮೈಸೂರು ವಿಶ್ವವಿದ್ಯಾಲಯದ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರಕ್ಕೆ ಗಣ್ಯರು ಪುಷ್ಪ ನಮನ ಸಲ್ಲಿಸಿದರು. ಪ್ರೊ.ಎಸ್.ಅಯ್ಯಪ್ಪನ್, ಪ್ರೊ.ಹೇಮಂತ್ ಕುಮಾರ್, ಪ್ರೊ.ಆರ್.ಶಿವಪ್ಪ, ಪ್ರೊ.ಎ.ಪಿ. ಜ್ಞಾನಪ್ರಕಾಶ್, ಪ್ರೊ. ಎಚ್. ರಾಜಶೇಖರ್ ಇನ್ನಿತರರು ಪಾಲ್ಗೊಂಡಿದ್ದರು.

**ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ವಿವಿಯನ್ನು ಸ್ಥಾಪನೆ ಮಾಡಿ ಇಂದಿಗೆ 105 ವರ್ಷವಾಯಿತು. ದೂರದೃಷ್ಟಿಯಿಂದ ವಿವಿ ಸ್ಥಾಪಿಸಿದರು. ಆ ಕಾರಣಕ್ಕಾಗಿಯೇ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ರಾಜರ್ಷಿ ಎಂದು ಮುಕ್ತಕಂಠದಿಂದ ಹೊಗಳಿದರು. ನಾಲ್ವಡಿ ಅವರು ಇಟ್ಟ ಒಂದೊಂದು ಹೆಜ್ಜೆಯೂ ನಾಡಿನ ಪ್ರಗತಿಗೆ ಮಹತ್ವದ ಮೈಲುಗಲ್ಲಾಗಿದೆ.**

| **ಪ್ರೊ.ಹೇಮಂತಕುಮಾರ್** ಮೈವಿವಿ ಕುಲಪತಿ

**ಮೈಸೂರು ವಿವಿ ಸಂಸ್ಥಾಪನಾ ದಿನವನ್ನು ಸಂಭ್ರಮದಿಂದ ಆಚರಿಸಿಕೊಳ್ಳುತ್ತಿದೆ. ಜತೆಗೆ 105 ವರ್ಷಗಳಿಂದ ವಿಶ್ವವಿದ್ಯಾಲಯ ನಡೆದು ಬಂದ ಹಾದಿಯನ್ನು ಮೆಲುಕು ಹಾಕಬೇಕಿದೆ. ವಿವಿ ನಾಡಿನ ಪರಂಪರೆಯೊಂದಿಗೆ ಹಾಸುಹೊಕ್ಕಾಗಿದೆ. ಯಾವ ಆಶಯ ಇಟ್ಟುಕೊಂಡು ಸ್ಥಾಪನೆಯಾಗಿದೆ ಎಂಬ ಉದ್ದೇಶವನ್ನು ಅರಿತು ಮುನ್ನಡೆಯಬೇಕು. ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಹಾಗೂ ವಿವೇಕವನ್ನು ತುಂಬುವ ಕೆಲಸ ಆಗಬೇಕು.**

| **ಪ್ರೊ.ಎಸ್.ಅಯ್ಯಪ್ಪನ್** ಕುಲಪತಿ, ಇಂಫಾಲ್ ಕೇಂದ್ರೀಯ ಕೃಷಿ ವಿವಿ

ಸಂಜೆವಾಣಿ

28-07-2021, ಬುಧವಾರ

# 'ವಿವಿ ಪಠ್ಯ ಮಕ್ಕಳಲ್ಲಿ ಆತ್ಮವಿಶ್ವಾಸ ತುಂಬಲಿ'

## ಮೈಸೂರು ವಿವಿ ಸಂಸ್ಥಾಪನಾ ದಿನಾಚರಣೆಯಲ್ಲಿ ಡಾ.ಸುಧಾಮೂರ್ತಿ ಸಲಹೆ



ಮೈಸೂರು: ಪದವಿ ಶಿಕ್ಷಣ ಪಡೆಯುವ ಮಕ್ಕಳಲ್ಲಿ ಆತ್ಮವಿಶ್ವಾಸ ತುಂಬಿ ಗಟ್ಟಿ ಬದುಕು ಕಟ್ಟಿಕೊಳ್ಳುವ ಪಠ್ಯ ರೂಪಿಸುವ ಅಗತ್ಯವಿದೆ ಎಂದು ಇನ್ಫೋಸಿಸ್ ಫೌಂಡೇಶನ್ ಅಧ್ಯಕ್ಷರಾದ ಡಾ.ಸುಧಾಮೂರ್ತಿ ಹೇಳಿದ್ದಾರೆ.

ಮೈಸೂರು ವಿವಿ ಕ್ರಾಫರ್ಡ್ ಹಾಲ್‌ನಲ್ಲಿ ಮಂಗಳವಾರ ನಡೆದ ಮೈಸೂರು ವಿವಿ ಸಂಸ್ಥಾಪನಾ ದಿನಾಚರಣೆಯಲ್ಲಿ ವರ್ಚುವಲ್ ಲೈವ್ ಮೂಲಕ ಮಾತನಾಡಿ, ಇಂದು ಜಗತ್ತಿನಾದ್ಯಂತ ಸಾವಿರಾರು ವಿವಿಗಳಿವೆ. ಪದವಿ ಪಡೆದು ಹೊರಗೆ ಬಂದ ಬಹುಪಾಲು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸದ ಕೊರತೆ ಎದ್ದು ಕಾಣುತ್ತದೆ. ಅವರಿಗೆ ಸಣ್ಣ ಸೋಲನ್ನು ಎದುರಿಸುವ ಮನೋಸ್ಥೈರ್ಯವೂ ಇರುವುದಿಲ್ಲ. ಜೀವನ ನಿರ್ವಹಣೆಗೆ ಮೂಲಭೂತ



ಅಂಶವಾದ ವ್ಯಾವಹಾರಿಕ ಜ್ಞಾನವೂ ಇರುವುದಿಲ್ಲ. ಇಂತಹ ಮಕ್ಕಳು ಜೀವನ ಕಟ್ಟಿಕೊಳ್ಳಲು ಹೆಣಗಾಡುವ ಸ್ಥಿತಿ ಸಾಮಾನ್ಯವಾಗಿದೆ. ಪಠ್ಯ ಬೋಧನೆ ಜೊತೆಗೆ ಆತ್ಮವಿಶ್ವಾಸ ತುಂಬುವ, ವ್ಯಾವಹಾರಿಕ ಜ್ಞಾನವನ್ನು ತಿಳಿಸಿಕೊಡುವ ಕೆಲಸ ವಿವಿಗಳಿಂದ ಆಗಬೇಕು ಎಂದು ಸಲಹೆ ನೀಡಿದರು.

**ಮಾದರಿ ವಿಶ್ವವಿದ್ಯಾನಿಲಯ:** ಮೈಸೂರಿನಲ್ಲಿ ವಿಶ್ವವಿದ್ಯಾನಿಲಯ ಸ್ಥಾಪಿಸಿ, ಬೆಳೆಸಿ, ನಮಗೆಲ್ಲಾ ದಾರಿ ದೀಪವಾದವರು ಮಹಾರಾಜರು. ಮೈಸೂರು ವಿವಿ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಜೊತೆಗೆ ಆತ್ಮವಿಶ್ವಾಸ ತುಂಬುವ ಕೇಂದ್ರವಾಗಿದೆ. ಮೈಸೂರು ವಿವಿ ಇಲ್ಲದಿದ್ದರೆ ನಾರಾಯಣ ಮೂರ್ತಿಯವರು ಇನ್ಫೋಸಿಸ್ ಸಂಸ್ಥೆ ಕಟ್ಟುತ್ತಿರಲಿಲ್ಲ. ನಾನು ಉತ್ತರ ಕರ್ನಾಟಕದಲ್ಲೇ ವ್ಯಾಸಂಗ ಮಾಡಿರಬಹುದು. ಆದರೆ ಮೈಸೂರು ವಿವಿಯ ಸಂಪನ್ಮೂಲ ವ್ಯಕ್ತಿಗಳನ್ನು ಅನುಸರಿಸುವ ಪ್ರಯತ್ನ ಮಾಡಿದ್ದು ಬಹಳಷ್ಟಿದೆ ಎಂದರು.

**ವಿಶ್ವವಿದ್ಯಾಲಯ ನೂತನ ಶಿಕ್ಷಣ ನೀತಿ ಅಳವಡಿಸಿಕೊಳ್ಳಲು ಎಲ್ಲಾ ತರಹದ ಸಿದ್ಧತೆ ನಡೆಸಿರುವುದು ಶ್ಲಾಘನೀಯ. ಇದರ ಜೊತೆಗೆ ಸಂಶೋಧನೆ ಮತ್ತು ಆವಿಷ್ಕಾರಕ್ಕೆ ಹೆಚ್ಚು ಒತ್ತು ನೀಡಬೇಕು.**

**-ಪ್ರೊ.ಎಸ್.ಅಯ್ಯಪ್ಪನ್,**
ಇಂಫಾಲದ ಕೇಂದ್ರೀಯ ಕೃಷಿ ವಿವಿ ಕುಲಪತಿ

**ಇಂದು ಮೈಸೂರು ವಿವಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಹೆಸರನ್ನು ಗಳಿಸಿದೆ. ಈ ಮೂಲಕ ಕೃಷ್ಣರಾಜ ಒಡೆಯರ್ ಅವರ ಆಶಯಗಳನ್ನು ಈಡೇರಿಸಿದೆ.**

**-ಪ್ರೊ.ಜಿ.ಹೇಮಂತ್‌ಕುಮಾರ್,**

**ಮಹಾರಾಜರಿಂದ ಉಳಿದ ಕನ್ನಡ:** ಮೈಸೂರು ಸಂಸ್ಥಾನದ ದೂರದೃಷ್ಟಿಯಿಂದಲೇ ಶಿಕ್ಷಣ ಮಾತ್ರವಲ್ಲದೇ ಹಲವು ವಿಷಯಗಳಲ್ಲಿ ಮೈಸೂರು ವಿವಿ ಮುಂಚೂಣಿಯಲ್ಲಿದೆ. ಮೈಸೂರು ರಾಜ ಮನೆತನ ಇದ್ದಿದ್ದರಿಂದಲೇ ಕನ್ನಡ ಭಾಷೆ ಉಳಿಯಲು ಸಾಧ್ಯವಾಯಿತು ಎಂದು ನುಡಿದರು.

ಇದಕ್ಕೂ ಮುನ್ನ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಅವರು ನಾಲ್ವಡಿ ಕೃಷ್ಣರಾಜ ಒಡೆಯರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕುಲಸಚಿವ ಪ್ರೊ. ಆರ್.ಶಿವಪ್ಪ, ಪ್ರೊ.ಎಚ್.ರಾಜಶೇಖರ್ ಇನ್ನಿತರರು ಭಾಗಿಯಾಗಿದ್ದರು. ನಿವೃತ್ತ ಪ್ರಾಧ್ಯಾಪಕ ಡಾ.ಸಿ.ನಾಗಣ್ಣ ಕಾರ್ಯಕ್ರಮ ನಿರೂಪಿಸಿದರು.

The New Indian Express
28/07/2021, Wednesday

# 'UoM must continue with legacy of Nalwadi'

ENS @Mysuru

RECALLING the contribution of the erstwhile Mysore king Nalwadi Krishnaraja Wadiyar, Infosys Foundation chairperson Dr Sudha Murty on Tuesday said the University of Mysore should work towards carrying forward the legacy of the great king who founded the university.

Delivering the 105th foundation day lecture here at Crawford Hall on Tuesday, Sudha pointed out that her husband and Infosys founder Dr N R Narayanamurty, an alumnus of the varsity, was able to set up Infosys after graduating from the university.

Expressing happiness for being conferred honorary doctorate, Sudha said there is a need to emphasise upon entrepreneurship among youth. Youngsters must not wait for jobs and instead focus on becoming entrepreneurs.

She underlined the importance of getting women educated and highlighted how students must develop sportsmanship which would help them in building good careers. She called upon students to develop the habit of questioning.

Prof S Ayyappan, chairman of Karnataka Science and Technology Academy and chancellor of Central Agricultural University, said implementation of the National Education Policy - 2020 by the university is an example to the state.

UoM vice-chancellor Prof G Hemantha Kumar, registrar R Shivappa and others were present.



Central Agricultural University VC prof S Ayyappan, UoM VC Prof G Hemanth Kumar and others offering floral tributes to the portrait of Nalwadi Krishnaraja Wadiyar during UoM Foundation Day in Mysuru on Tuesday | UDAYSHANKAR S

ವಿಜಯ ಕರ್ನಾಟಕ

22/1/2021, ಶುಕ್ರವಾರ

# ವಿವಿಗಳು ಆತ್ಮವಿಶ್ವಾಸ, ಕೌಶಲ್ಯ ತುಂಬಲಿ

## ಮೈಸೂರು ವಿವಿ ಸಂಸ್ಥಾಪನಾ ದಿನಾಚರಣೆಯಲ್ಲಿ ಡಾ. ಸುಧಾಮೂರ್ತಿ ಕಿವಿಮಾತು

■ ವಿಕ ಸುದ್ದಿಲೋಕ ಮೈಸೂರು

ಇಂದಿನ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯಗಳು ಶಿಕ್ಷಣ ನೀಡುವ ಜತೆಗೆ ಅವರಲ್ಲಿ ಧೈರ್ಯ, ಆತ್ಮ ವಿಶ್ವಾಸ ತುಂಬಬೇಕು. ಕೌಶಲ್ಯಗಳನ್ನು ಕಲಿಸಿಕೊಡಬೇಕು ಎಂದು ಇನ್ಫೋಸಿಸ್ ಪ್ರತಿಷ್ಠಾನದ ಸಂಸ್ಥಾಪಕಿ ಡಾ. ಸುಧಾಮೂರ್ತಿ ಸಲಹೆ ನೀಡಿದ್ದಾರೆ.

ಕ್ರಾಫರ್ಡ್ ಭವನದಲ್ಲಿ ಮಂಗಳವಾರ ನಡೆದ ಮೈಸೂರು ವಿಶ್ವವಿದ್ಯಾಲಯದ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ವರ್ಚುಯಲ್ ಮೂಲಕ ಭಾಗಿಯಾದ ಅವರು, ''ನಮ್ಮ ಶಿಕ್ಷಣ ಪದ್ಧತಿ ನಮಗೆ ಕಲಿಸದ, ಆದರೆ ನಮ್ಮ ಬದುಕಿಗೆ ಇದು ಅಗತ್ಯವಾಗಿ ಬೇಕಾದ ಸಂಗತಿ'' ವಿಷಯ ಕುರಿತು ಮಾತನಾಡಿದರು.

''ಮಕ್ಕಳು ಪ್ರಶ್ನೆ ಕೇಳುವುದನ್ನು ಯಾರೂ ತಡೆಯಬಾರದು. ಪ್ರಶ್ನೆ ಕೇಳದ ಮಗುವಿನಲ್ಲಿ ಕುತೂಹಲವೇ ಬೆಳೆಯುವುದಿಲ್ಲ, ಸೋಲನ್ನು ಹೇಗೆ ಎದುರಿಸಬೇಕು? ಆತ್ಮವಿಶ್ವಾಸದಿಂದ ಬದುಕನ್ನು ಸಾಗಿಸುವುದು ಹೇಗೆ? ಎಂಬುದರ ಬಗ್ಗೆ ಅಧ್ಯಾಪಕರು ತಿಳಿವಳಿಕೆ ನೀಡಬೇಕು,'' ಎಂದು ಸಲಹೆ ನೀಡಿದರು.

''ವಿದ್ಯಾರ್ಥಿಗಳಿಗೆ ಪಠ್ಯ ಬೋಧನೆಯ ಜತೆಗೆ ಕ್ರೀಡೆ ಮತ್ತು ಯೋಗ ತರಗತಿಗಳನ್ನು ನಡೆಸಬೇಕು. ಇದರಿಂದ ಅವರ ಮಾನಸಿಕ ಮತ್ತು ದೈಹಿಕ ಆರೋಗ್ಯದ ಮೇಲೆ ಉತ್ತಮ ಪರಿಣಾಮ ಬೀರುತ್ತದೆ,'' ಎಂದರು.

**ಕೌಶಲ್ಯಗಳನ್ನು ಕಲಿಸಿ:** ''ನಡೆಯಬೇಕಾದರೆ ಎಡವಿ ಬೀಳುವುದು ಸಾಮಾನ್ಯ. ಕಷ್ಟಗಳು ಇರದ ಜೀವನ ಇದೆಯಾ? ನಮ್ಮ ಮೈನಸ್ ಪಾಯಿಂಟ್ ನಮಗೆ ಗೊತ್ತಿದ್ದರೆ, ಅದನ್ನು ಬಹುಬೇಗ ತಿದ್ದುಕೊಂಡರೆ ಜೀವನದಲ್ಲಿ ಯಶಸ್ಸು ಸಾಧಿಸಬಹುದು. ಪಾಠದಷ್ಟೇ ಆಟದಲ್ಲೂ ಆಸಕ್ತಿ ಬೆಳೆಸಿಕೊಳ್ಳಬೇಕು. ಮಕ್ಕಳಿಗೆ ಹೊಸ ಕೌಶಲ್ಯಗಳನ್ನು ಹೇಳಿಕೊಡಬೇಕು. ಹಣಕಾಸು ನಿರ್ವಹಣೆ ಬಗ್ಗೆ ತಿಳಿಸಿಕೊಡಬೇಕು. ಸಾಮಾನ್ಯ ಜ್ಞಾನ ತುಂಬುವುದು ಮುಖ್ಯ. ಸಕಾರಾತ್ಮಕ ಚಿಂತನೆ ಬೆಳೆಸಿಕೊಳ್ಳಬೇಕು. ಎಲ್ಲಾ ಕಾಲಕ್ಕೂ ಜೀವನ ಪ್ರೀತಿಯನ್ನು ಕಳೆದುಕೊಳ್ಳಬಾರದು,'' ಎಂದು ಹೇಳಿದರು.

''ಇಂದು ಜಗತ್ತಿನಾದ್ಯಂತ ಸಾವಿರಾರು ವಿವಿಗಳಿವೆ. ಪದವಿ ಪಡೆದು ಆಚೆ ಬಂದ ಬಹುಪಾಲು ವಿದ್ಯಾರ್ಥಿಗಳಲ್ಲಿ ಭಯ, ಆತಂಕ, ಆತ್ಮವಿಶ್ವಾಸದ ಕೊರತೆ ಎದ್ದು ಕಾಣುತ್ತದೆ. ಅವರಿಗೆ ಸಣ್ಣ ಸೋಲನ್ನು ಎದುರಿಸುವ ಮನೋಸ್ಥೈರ್ಯ ಇರುವುದಿಲ್ಲ, ಜೀವನ ನಿರ್ವಹಣೆಗೆ ಮೂಲ ಅಂಶವಾದ ವ್ಯಾವಹಾರಿಕ ಜ್ಞಾನವೂ ಇರುವುದಿಲ್ಲ, ಇಂತಹ ಮಕ್ಕಳು ಸಮಾಜದಲ್ಲಿ ತಮ್ಮ ಜೀವನ ಕಟ್ಟಿಕೊಳ್ಳಲು ಹೆಣಗಾಡುವ ಸ್ಥಿತಿ ಸಾಮಾನ್ಯವಾಗಿದೆ. ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯ ಮಕ್ಕಳಿಗೆ ಪಠ್ಯ ಬೋಧನೆ ಜತೆಗೆ ಧೈರ್ಯ, ಆತ್ಮ ವಿಶ್ವಾಸ ತುಂಬುವ ಕೆಲಸ ಆಗಬೇಕು. ತೆರೆದ ಮನಸ್ಥಿತಿಯನ್ನು ಬೆಳೆಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಪ್ರಚೋದಿಸಬೇಕು. ಇದರ ಜತೆಗೆ ಆದಾಯ, ತೆರಿಗೆ, ಲಾಭ ಮತ್ತು ಹಣದ ನಿರ್ವಹಣೆಗೆ ಸಂಬಂಧಿಸಿದಂತೆ ವ್ಯಾವಹಾರಿಕ ಜ್ಞಾನವನ್ನು ತಿಳಿಸಿಕೊಡುವ ಕೆಲಸ ಆಗಬೇಕು,'' ಎಂದು ಸಲಹೆ ನೀಡಿದರು.



ಮೈಸೂರು ವಿವಿಯಲ್ಲಿ ನಡೆದ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು ಕುಲಪತಿ ಹೇಮಂತ್ ಕುಮಾರ್ ಉದ್ಘಾಟಿಸಿದರು.

### ಮೈವಿವಿ ಇಲ್ಲದಿದ್ದರೆ ನಾರಾಯಣ ಮೂರ್ತಿ ಇನ್ಫೋಸಿಸ್ ಕಟ್ಟುತ್ತಿರಲಿಲ್ಲ



ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ನಿರ್ಮಾಣವಾದ ಮೈಸೂರು ವಿವಿ ಅವರ ಆಶಯದಂತೆ ನಡೆದು ಬರುತ್ತಿರುವುದು ಶ್ಲಾಘನೀಯ. ಅವರು ಸಮಾಜಕ್ಕೆ ನೀಡಿದ ಅಪಾರ ಕೊಡುಗೆಗಳಲ್ಲಿ ಮೈಸೂರು ವಿವಿಯೂ ಒಂದಾಗಿದೆ. ಇಂತಹ ಪ್ರತಿಷ್ಠಿತ ವಿವಿಯಲ್ಲಿ ಇನ್ಫೋಸಿಸ್ ಸಂಸ್ಥಾಪಕ ನಾರಾಯಣ ಮೂರ್ತಿಯವರು ಓದಿರುವುದು ನನಗೆ ಹೆಮ್ಮೆ. ಈ ವಿಶ್ವವಿದ್ಯಾಲಯ ಇಲ್ಲದಿದ್ದರೆ ನಾರಾಯಣ ಮೂರ್ತಿಯವರು ಇನ್ಫೋಸಿಸ್ ಕಟ್ಟುತ್ತಿರಲಿಲ್ಲ, ಈ ವಿಶ್ವವಿದ್ಯಾಲಯ ಸಮಾಜಕ್ಕೆ ಹಲವು ಮಂದಿ ಮೇರು ವ್ಯಕ್ತಿಗಳನ್ನು ನೀಡಿದೆ ಎಂದು ಎಂದು ಸುಧಾಮೂರ್ತಿ ಬಣ್ಣಿಸಿದರು.

ನಾನು ಉತ್ತರ ಕರ್ನಾಟಕದವಳು, ನಮ್ಮಂತವರಿಗೆಲ್ಲಾ ಜ್ಞಾನ ತುಂಬುವ ಕೇಂದ್ರಗಳೇ ವಿವಿಗಳು. ನಾನು ಉತ್ತರ ಕರ್ನಾಟಕದಲ್ಲೇ ವ್ಯಾಸಂಗ ಮಾಡಿರಬಹುದು. ಆದರೆ, ಮೈಸೂರು ವಿವಿಯ ಸಂಪನ್ಮೂಲ ವ್ಯಕ್ತಿಗಳನ್ನು ಅನುಸರಿಸುವ ಪ್ರಯತ್ನ ಮಾಡಿದ್ದು ಬಹಳಷ್ಟಿದೆ. ಇದೆಲ್ಲವೂ ನಮ್ಮ ಸಾಧನೆಗೆ ಸಹಕಾರವಾಗುತ್ತದೆ ಎಂದು ಹೇಳಿದರು.

ಕೇಂದ್ರೀಯ ಕೃಷಿ ವಿವಿ ಅಧ್ಯಕ್ಷ ಪ್ರೊ. ಎಸ್.ಅಯ್ಯಪ್ಪನ್ ಮಾತನಾಡಿ, ''ರಾಷ್ಟ್ರೀಯ ಶಿಕ್ಷಣ ನೀತಿ-2020 ಜಾರಿಗೆ ಮೈಸೂರು ವಿಶ್ವವಿದ್ಯಾಲಯ ರಾಜ್ಯಕ್ಕೆ ಮಾದರಿಯಾಗಿದೆ. ಮೈಸೂರು ವಿವಿ ಸ್ಥಾಪನೆಯಾಗಿ 105 ವರ್ಷಗಳಾಗಿದ್ದು, ಇಂದಿಗೂ ಹೊಸ ಆವಿಷ್ಕಾರಗಳ ಮೂಲಕ ವಿಶ್ವದ ಗಮನ ಸೆಳೆದಿದೆ. ನಮ್ಮ ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಮುಖ ಉದ್ದೇಶವೆಂದರೆ ಮಲ್ಟಿಡಿಸಿಪ್ಲಿನರಿ ಹಾಗೂ ಫ್ಲೆಕ್ಸಿಬಿಲಿಟಿ. ಮೈಸೂರು ವಿವಿ ಇವೆರಡನ್ನೂ ಜತನದಿಂದ ಕಾಪಾಡಿಕೊಂಡು ಬಂದಿದೆ. ಸಬಲ, ಸದೃಢತೆ ಹಾಗೂ ಸಕ್ರಿಯ ಮೈಸೂರು ವಿವಿ ಧ್ಯೇಯವಾಗಿದೆ,'' ಎಂದು ಶ್ಲಾಘಿಸಿದರು.

''ಮೈಸೂರು ವಿವಿ ಮೂರು ಸ್ನಾತಕೋತ್ತರ ಕೇಂದ್ರಗಳನ್ನು ಹೊಂದಿದೆ. 74 ವಿಭಾಗಗಳಿವೆ. 234 ಕಾಲೇಜು ಇದರ ವ್ಯಾಪ್ತಿಗೆ ಬರುತ್ತವೆ. 1.36 ಲಕ್ಷ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ರಾಷ್ಟ್ರೀ[ಯ] ಮತ್ತು ಅಂತಾರಾಷ್ಟ್ರೀಯ ಸಹಭಾಗಿತ್ವ ಹೊಂ[ದಿದೆ]. ಇಷ್ಟೆಲ್ಲಾ ಹೆಗ್ಗಳಿಕೆ ಇರುವ ಮೈಸೂರು ವಿವಿ[ಯನ್ನು] ಹೊಗಳದೆ ಇರಲು ಹೇಗೆ ಸಾಧ್ಯ ?,'' ಎಂದರು.

ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಮಾತನಾಡಿ, ''ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ವಿವಿಯನ್ನು ಸ್ಥಾಪನೆ ಮಾಡಿ ಇಂದಿಗೆ 105 ವರ್ಷಗಳಾಯಿತು. ದೂರದೃಷ್ಟಿಯಿಂದ ಅಂದಿನ ಮೈಸೂರು ಮಹಾರಾಜರು ಈ ವಿವಿಯನ್ನು ಸ್ಥಾಪಿಸಿದರು. ಆ ಕಾರಣಕ್ಕಾಗಿಯೇ ಮಹಾತ್ಮ ಗಾಂಧೀಜಿ ಅವರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ರಾಜರ್ಷಿ ಎಂದು ಮುಕ್ತಕಂಠದಿಂದ ಹೊಗಳಿದರು. ನಾಲ್ವಡಿ ಅವರು ಇಟ್ಟ ಒಂದೊಂದು ಹೆಜ್ಜೆಯೂ ನಾಡಿನ ಪ್ರಗತಿಗೆ ಮಹತ್ವದ ಮೈಲಿಗಲ್ಲಾಯಿತು,'' ಎಂದು ಹೇಳಿದರು.

ವಿವಿ ಕುಲಸಚಿವರಾದ ಪ್ರೊ.ಆರ್.ಶಿವಪ್ಪ, ಪರೀಕ್ಷಾಂಗ ಕುಲಸಚಿವ ಪ್ರೊ.ಎ.ಪಿ.ಜ್ಞಾನಪ್ರಕಾಶ್, ಕೆ-ಸೆಟ್ ಸಂಯೋಜನಾಧಿಕಾರಿ ಪ್ರೊ.ರಾಜಶೇಖರ ಸೇರಿದಂತೆ ಬೋಧಕರು, ಬೋಧಕೇತರರು ಹಾಜರಿದ್ದರು. ಇದಕ್ಕೂ ಮುನ್ನ 105 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಮೈಸೂರು ವಿಶ್ವವಿದ್ಯಾಲಯದ ಸಂಸ್ಥಾಪಕ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್

ಆಂದೋಲನ

28/07/2021, ಬುಧವಾರ

## ವಿದ್ಯಾರ್ಥಿಗಳು ಶಿಕ್ಷಣದೊಂದಿಗೆ ಬದುಕಲು ಅನಿವಾರ್ಯವಾದ

# ವ್ಯವಹಾರಿಕ ಜ್ಞಾನ ಹೊಂದಬೇಕು

- ಇನ್‌ಫೋಸಿಸ್ ಫೌಂಡೇಷನ್ ಮುಖ್ಯಸ್ಥರಾದ ಡಾ. ಸುಧಾಮೂರ್ತಿ ಕಿವಿಮಾತು
- ಮೈಸೂರು ವಿಶ್ವವಿದ್ಯಾಲಯ ಸ್ಥಾಪಿಸಿದ ನಾಲ್ವಡಿ ಅವರಿಗೆ ನಮನ



ಮೈಸೂರು, ಜು.27(ಎಂಟಿವೈ)– ವಿದ್ಯಾರ್ಥಿಗಳು ಶಿಕ್ಷಣ ಪಡೆಯುವುದರೊಂದಿಗೆ ಧೈರ್ಯ, ಆತ್ಮವಿಶ್ವಾಸದೊಂದಿಗೆ ಕನಿಷ್ಠ ವ್ಯವಹಾರಿಕ ಜ್ಞಾನ ಹೊಂದಿದಾಗ ಮಾತ್ರ ಏಳಿಗೆ ಹೊಂದಲು ಸಾಧ್ಯ ಎಂದು ಇನ್ಫೋಸಿಸ್ ಪ್ರತಿಷ್ಠಾನದ ಮುಖ್ಯಸ್ಥೆ ಡಾ. ಸುಧಾ ಮೂರ್ತಿ ಅಭಿಪ್ರಾಯ ಪಟ್ಟಿದ್ದಾರೆ.

ಮೈಸೂರು ವಿವಿ ಕ್ರಾಫರ್ಡ್ ಭವನದಲ್ಲಿ ಮಂಗಳವಾರ ನಡೆದ ಮೈಸೂರು ವಿಶ್ವವಿದ್ಯಾನಿಲಯದ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ವರ್ಚುವಲ್ ಲೈವ್ ಮೂಲಕ ಪಾಲ್ಗೊಂಡು ಮಾತನಾಡಿದ ಅವರು, ಕನ್ನಡ ಭಾಷೆ ಉಳಿವಿಗೆ ಮೈಸೂರು ಅರಸರ ಕೊಡುಗೆ ಅಪಾರ. ಅದರಲ್ಲೂ ನಾಲ್ವಡಿ ಕೃಷ್ಣರಾಜ ಒಡೆಯರ್ ಮೈಸೂರು ವಿಶ್ವವಿದ್ಯಾನಿಲಯ ಸೇರಿದಂತೆ ಅನೇಕ ಸಂಸ್ಥೆಗಳನ್ನು ಸ್ಥಾಪಿಸಿದರು. ಆಡು ಮುಟ್ಟದ ಸೊಪ್ಪಿಲ್ಲ ಎಂಬ ಗಾದೆ ಮಾತಿನಂತೆ ನಾಲ್ವಡಿ ಅವರು, ಶಿಕ್ಷಣ, ಆರೋಗ್ಯ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಅಪಾರ ಕೊಡುಗೆ ನೀಡಿದ್ದಾರೆ. ಅವರು ಕಟ್ಟಿಸಿದ ಮೈಸೂರು ವಿಶ್ವವಿದ್ಯಾನಿಲಯವು ಮಹಾನ್ ಪುತ್ರರತ್ನ, ಕನ್ಯಾಮಣಿಯನ್ನು ಕೊಡುಗೆ ನೀಡಿದೆ. ಅಲ್ಲದೆ ಅನೇಕ ಮಂದಿ ಭಾರತರತ್ನ, ಪದ್ಮಭೂಷಣ ಸೇರಿದಂತೆ ಅನೇಕ ಬಿರುದನ್ನು ಪಡೆದವರನ್ನು ನಾಡಿಗೆ ಸಮರ್ಪಿಸಿದೆ. ಮೈಸೂರು ವಿಶ್ವವಿದ್ಯಾನಿಲಯ ಇಲ್ಲದಿದ್ದರೆ ಡಾ.ನಾರಾಯಣ ಮೂರ್ತಿ ಏಳಿಗೆ ಸಾಧಿಸುತ್ತಿರಲಿಲ್ಲ. ಇನ್ಫೋಸಿಸ್ ಸಂಸ್ಥೆ ಸ್ಥಾಪಿಸುತ್ತಿರಲಿಲ್ಲ ಎಂದು ಅಭಿಪ್ರಾಯಪಟ್ಟರು.

ವಿದ್ಯಾರ್ಥಿಗಳು ಶಿಕ್ಷಣಕ್ಕೆ ಮಾತ್ರ ಸೀಮಿತಗೊಳ್ಳಬಾರದು. ಶಿಕ್ಷಣದೊಂದಿಗೆ ಧೈರ್ಯ ಮತ್ತು ಆತ್ಮಸ್ಥೈರ್ಯ ಬೆಳೆಸಿಕೊಳ್ಳಬೇಕು. ರಾಜರ್ಷಿ ನಾಲ್ವಡಿ ಅವರಿಂದ ನಿರ್ಮಾಣವಾದ ಮೈಸೂರು ವಿವಿ ಅವರ ಆಶಯದಂತೆ ಮುನ್ನಡೆಯುತ್ತಿರುವುದು ಶ್ಲಾಘನೀಯ. ಇಂದು ಜಗತ್ತಿನಾದ್ಯಂತ ಸಾವಿರಾರು ವಿವಿಗಳಿವೆ. ಪದವಿ ಪಡೆದು ಆಚೆ ಬಂದ ಬಹುಪಾಲು ವಿದ್ಯಾರ್ಥಿಗಳಲ್ಲಿ ಭಯ, ಆತಂಕ, ಆತ್ಮವಿಶ್ವಾಸದ ಕೊರತೆ ಎದ್ದು ಕಾಣುತ್ತದೆ. ಅವರಿಗೆ ಸಣ್ಣ ಸೋಲನ್ನು ಎದುರಿಸುವ ಮನೋಸ್ಥೈರ್ಯ ಇರುವುದಿಲ್ಲ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ಧೈರ್ಯ, ಆತ್ಮವಿಶ್ವಾಸ ಬೆಳೆಸಿಕೊಳ್ಳುವಂತೆ ಆಗ್ಗಿಂದಾಗ್ಗೆ ಹೇಳುತ್ತಿರುತ್ತೇನೆ ಎಂದರು.

ಜೀವನ ನಿರ್ವಹಣೆಗೆ ವ್ಯವಹಾರಿಕ ಜ್ಞಾನ ಬಹುಮುಖ್ಯ. ಅದರಲ್ಲೂ ಹೆಣ್ಣು ಮಕ್ಕಳು ಉಳಿತಾಯ, ಹೂಡಿಕೆ, ವೆಚ್ಚ ಮಾಡುವುದು ಸೇರಿದಂತೆ ಎಲ್ಲಾ ವಿಷಯದಲ್ಲೂ ವ್ಯವಹಾರಿಕ ಜ್ಞಾನ ಹೊಂದಿರಬೇಕು. ಯಾರಲ್ಲಿ ಧೈರ್ಯ, ಆತ್ಮವಿಶ್ವಾಸ ಇರುವುದಿಲ್ಲವೋ ಅಂತಹವರು ಯಾವುದೇ ಕ್ಷೇತ್ರದಲ್ಲೂ ಏಳಿಗೆ ಸಾಧಿಸಲು ಸಾಧ್ಯವಾಗುವುದಿಲ್ಲ. ಇಂತಹ ಮಕ್ಕಳು ಸಮಾಜದಲ್ಲಿ ತಮ್ಮ ಜೀವನ ಕಟ್ಟಿಕೊಳ್ಳಲು ಹೆಣಗಾಡುವ ಸ್ಥಿತಿ ಸಾಮಾನ್ಯವಾಗಿದೆ. ಇದನ್ನು ಗಂಭೀರವಾಗಿ ಪರಿಗಣಿಸಿ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳಿಗೆ ಪಠ್ಯ ಬೋಧನೆಯೊಂದಿಗೆ, ಜೀವನ ರೂಪಿಸಿಕೊಳ್ಳುವ ಭರವಸೆ ಮೂಡಿಸಬೇಕು. ತೆರೆದ ಮನಸ್ಥಿತಿಯನ್ನು ಬೆಳೆಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಪ್ರಚೋದಿಸಬೇಕು. ಇದರ ಜೊತೆ ಜೊತೆಗೆ ಆದಾಯ, ತೆರಿಗೆ, ಲಾಭ ಮತ್ತು ಹಣದ ನಿರ್ವಹಣೆಗೆ ಸಂಬಂಧಿಸಿದಂತೆ ವ್ಯವಹಾರಿಕ ಜ್ಞಾನವನ್ನು ತಿಳಿಸಿಕೊಡುವ ಕೆಲಸ ಆಗಬೇಕು ಎಂದು ಅಭಿಪ್ರಾಯಪಟ್ಟರು.

ವಿದ್ಯಾರ್ಥಿಗಳು ಕ್ರೀಡಾಸ್ಫೂರ್ತಿ ಬೆಳೆಸಿಕೊಳ್ಳಬೇಕು. ಕ್ರೀಡೆಗಳಲ್ಲಿ ಸೋಲು–ಗೆಲುವು ಸಾಮಾನ್ಯ. ಯಾವುದೇ ಕ್ರೀಡೆಯಲ್ಲಿ ಒಬ್ಬರು ಗೆದ್ದರೆ, ಮತ್ತೊಬ್ಬರು ಸೋಲನನುಭವಿಸುವುದು ಸಹಜ. ಆದರೆ ಕ್ರೀಡಾಪಟುಗಳು ಎರಡನ್ನೂ ಸಮಾನದೃಷ್ಟಿಯಿಂದ ಸ್ವೀಕರಿಸುತ್ತಾರೆ. ಅದೇ ಮಾದರಿಯಲ್ಲಿ ಎಲ್ಲರೂ ಕ್ರೀಡಾಸ್ಫೂರ್ತಿ ಬೆಳೆಸಿಕೊಳ್ಳಬೇಕು. ಜೀವನದಲ್ಲಿ ಒಮ್ಮೆ ಸೋತರೆ ಧೃತಿಗೆಡಬಾರದು ಆ ಸೋಲು ಮುಂದಿನ ಗೆಲುವಿಗೆ ಸೋಪಾನವಾಗುವಂತೆ ನಾವೇ ಸ್ವತಃ ವಾತಾವರಣ ರೂಪಿಸಿಕೊಳ್ಳಬೇಕು. ಕ್ರೀಡೆ ಮಾತ್ರವಲ್ಲದೆ, ಯೋಗ ಅಭ್ಯಾಸ ಮಾಡಬೇಕು. ಯೋಗ ಇತ್ತೀಚಿನ ದಿನಗಳಲ್ಲಿ ಔಷಧಿಯಂತೆ ಭಾಸವಾಗಿದೆ. ಈ ಹಿನ್ನೆಲೆಯಲ್ಲಿ ಯೋಗ ಮಾಡಲು ಕಲಿಯಬೇಕು. ಇದರಿಂದ ಅವರ ಮಾನಸಿಕ ಮತ್ತು ದೈಹಿಕ ಆರೋಗ್ಯದ ಮೇಲೆ ಉತ್ತಮ ಪರಿಣಾಮ ಬೀರಲಿದೆ ಎಂದರು. ಕೆಲವರಿಗೆ ಯಶಸ್ಸು ಬಂದರೆ ಕಳ್ಳು(ನಶೆ) ಕುಡಿದಂತೆ ತೇಲಾಡುತ್ತಾರೆ. ಅಂತಹವರು ಮನಸ್ಸಿನ ಸ್ಥಿಮಿತತೆ ಕಳೆದುಕೊಂಡು ವರ್ತಿಸುವುದನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ದಾನ ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಂಡು ಸಂಕಷ್ಟದಲ್ಲಿರುವವರಿಗೆ ನೆರವಾಗಬೇಕು. ದುರಾಸೆ ಬಿಡಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಕೇಂದ್ರೀಯ ಕೃಷಿ ವಿವಿ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ ಮುಖ್ಯಸ್ಥ ಪ್ರೊ.ಎಸ್. ಅಯ್ಯಪ್ಪನ್ ಮಾತನಾಡಿ, ಮೈಸೂರು ವಿವಿ ಸಂಸ್ಥಾಪನಾ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಿಕೊಳ್ಳುತ್ತಿದೆ. ಇದರ ಜೊತೆಗೆ 105 ವರ್ಷಗಳಿಂದ ವಿಶ್ವವಿದ್ಯಾಲಯ ನಡೆದು ಬಂದ ಹಾದಿಯನ್ನು ಮೆಲುಕು ಹಾಕಬೇಕಿದೆ. ಈ ಮೂಲಕ ಹಿಂದೆ ಏನೆಲ್ಲ ಕೆಲಸಗಳಾಗಿವೆ. ಇಂದು ಏನಾಗಬೇಕು ಎಂಬುದರ ಬಗ್ಗೆ ಸ್ಪಷ್ಟ ಚಿತ್ರಣ ಸಿಗಲಿದೆ. ವಿಶ್ವವಿದ್ಯಾಲಯ ನೂತನ ಶಿಕ್ಷಣ ನೀತಿ ಅಳವಡಿಸಿಕೊಳ್ಳಲು ಎಲ್ಲಾ ತರಹದ ಸಿದ್ಧತೆ ನಡೆಸಿರುವುದು ಶ್ಲಾಘನೀಯ. ಇದರ ಜೊತೆಗೆ ಸಂಶೋಧನೆ ಮತ್ತು ಆವಿಷ್ಕಾರಕ್ಕೆ ಹೆಚ್ಚು ಒತ್ತು ನೀಡಬೇಕು. ಬೋಧಕರಿಗೆ ಪಠ್ಯ ಬೋಧಿಸುವುದು ಅಂತಿಮ ಕಾಯಕವಾಗಿರಬಾರದು. ಬೋಧನೆ ಮತ್ತು ಸಂಶೋಧನೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಅಧ್ಯಾಪಕರು ಬೋಧನೆಯೊಂದಿಗೆ ಗುಣಮಟ್ಟದ ಸಂಶೋಧನೆಗೂ ಒತ್ತು ನೀಡಬೇಕು ಎಂದು ಸಲಹೆ ನೀಡಿದರು.


ಮೈಸೂರು ವಿವಿ ಪರಂಪರೆಯೊಂದಿಗೆ ಹಾಸು ಹೊಕ್ಕಾಗಿದೆ. ಈ ವಿಶ್ವವಿದ್ಯಾಲಯ ಯಾವ ಆಶಯ ಇಟ್ಟುಕೊಂಡು ಸ್ಥಾಪನೆಯಾಗಿದೆ ಎಂಬ ಉದ್ದೇಶವನ್ನು ಅರಿತು ಮುನ್ನಡೆಯಬೇಕು. ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಹಾಗೂ ವಿವೇಕವನ್ನು ತುಂಬುವ ಕೆಲಸ ಆಗಬೇಕು ಎಂದು ಹೇಳಿದರು. ಇದಕ್ಕೂ ಮುನ್ನ 105 ವರ್ಷ ಪೂರೈಸಿದ ಮೈಸೂರು ವಿಶ್ವವಿದ್ಯಾನಿಲಯದ ಸಂಸ್ಥಾಪಕರಾದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ಮಾಡಿದರು. ಕಾರ್ಯಕ್ರಮದಲ್ಲಿ ಮೈಸೂರು ವಿವಿ ಕುಲಪತಿ ಹೇಮಂತ್ ಕುಮಾರ್, ಕುಲಸಚಿವ ಪ್ರೊ.ಆರ್. ಶಿವಪ್ಪ ಇದ್ದರು.

ಪ್ರಜಾವಾಣಿ
28/7/2021, ಬುಧವಾರ

# ಉದ್ಯಮಶೀಲರಾಗಿ: ಯುವಜನರಿಗೆ ಕರೆ

## ಮೈಸೂರು ವಿ.ವಿ ಸಂಸ್ಥಾಪನಾ ದಿನಾಚರಣೆ: ಡಾ.ಸುಧಾಮೂರ್ತಿ ಉಪನ್ಯಾಸ

ಪ್ರಜಾವಾಣಿ ವಾರ್ತೆ



ಮೈಸೂರು ವಿಶ್ವವಿದ್ಯಾಲಯದ 105ನೇ ಸಂಸ್ಥಾಪನಾ ದಿನದ ಪ್ರಯುಕ್ತ ಕ್ರಾಫರ್ಡ್ ಭವನದಲ್ಲಿ ಮಂಗಳವಾರ ನಾಲ್ವಡಿ ಕೃಷ್ಣರಾಜ ಒಡೆಯರ್ ಭಾವಚಿತ್ರಕ್ಕೆ ಕುಲಪತಿ ಪ್ರೊ.ಜಿ.ಹೇಮಂತಕುಮಾರ್, ಕುಲಸಚಿವ ಪ್ರೊ.ಆರ್.ಶಿವಪ್ಪ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಅಧ್ಯಕ್ಷ ಪ್ರೊ.ಎಸ್.ಅಯ್ಯಪ್ಪನ್ ಪುಷ್ಪ ನಮನ ಸಲ್ಲಿಸಿದರು

ಮೈಸೂರು: 'ವಿದ್ಯಾರ್ಥಿಗಳು ಉದ್ಯಮಶೀಲರಾಗುವ ಕಡೆಗೆ ಆಲೋಚಿಸಬೇಕು. ಆದರಿಂದ ಹಲವರಿಗೆ ಉದ್ಯೋಗ ಸಿಗುತ್ತದೆ. ಅದೇ ಕಾರಣದಿಂದ ಎನ್.ಆರ್.ನಾರಾಯಣಮೂರ್ತಿ ಇನ್ಫೊಸಿಸ್ ಕಟ್ಟಿದರು. ಅವರೂ ಮೈಸೂರು ವಿಶ್ವವಿದ್ಯಾಲಯದಿಂದ ಕಲಿತವರು' ಎಂದು ಇನ್ಫೊಸಿಸ್ ಫೌಂಡೇಶನ್ ಸಂಸ್ಥಾಪಕಿ ಡಾ.ಸುಧಾ ಮೂರ್ತಿ ಸ್ಮರಿಸಿದರು.

ನಗರದ ಮಾನಸ ಗಂಗೋತ್ರಿಯ ಕ್ರಾಫರ್ಡ್ ಭವನದಲ್ಲಿ ಮಂಗಳವಾರ ವಿಶ್ವವಿದ್ಯಾಲಯದ 105ನೇ ಸಂಸ್ಥಾಪನಾ ದಿನಾಚರಣೆ ಪ್ರಯುಕ್ತ 'ಶಿಕ್ಷಣ ವ್ಯವಸ್ಥೆಯಿಂದ ನಾವು ಕಲಿಯದೇ ಉಳಿದಿದ್ದೇ ನಮ್ಮ ಬದುಕಿನ ನಿಜವಾದ ಪಾಠಗಳು' ಕುರಿತು ಆನ್‌ಲೈನ್ ಉಪನ್ಯಾಸ ನೀಡಿದ ಅವರು, 'ನಮಗಿಬ್ಬರಿಗೂ 80ರ ದಶಕದಲ್ಲಿ ಮುಂಬೈನಲ್ಲಿ ಒಳ್ಳೆಯ ಕೆಲಸವಿತ್ತು. ಆರಾಮವಾಗಿ ಇದ್ದು ಬಿಡಬಹುದಿತ್ತು. ಆದರೆ, ಮೂರ್ತಿ ಇನ್ಫೊಸಿಸ್ ಆರಂಭಿಸಲು ಮುಂದಾದರು. ಸಂಪತ್ತು ಸೃಷ್ಟಿಸಬೇಕು. ಹಲವರಿಗೆ ಕೆಲಸ ನೀಡಬೇಕು ಎಂದು ಅವರು ಹೇಳುತ್ತಿದ್ದರು. ಆಗ ಕಂಪನಿಗೆ ₹ 10 ಸಾವಿರ ಕೊಟ್ಟಿದ್ದೆ. ಇಂದು ಇನ್ಫೊಸಿಸ್ ಹೆಮ್ಮರವಾಗಿ ಬೆಳೆದಿದೆ' ಎಂದರು.

- ಸಂಪತ್ತು ಸೃಷ್ಟಿಯಿಂದ ಬಡತನ ನಿರ್ಮೂಲನೆ
- ಉದ್ಯಮಶೀಲತೆಯಿಂದ ಉದ್ಯೋಗ ಸೃಷ್ಟಿ

ಕುಲಪತಿ ಪ್ರೊ.ಜಿ.ಹೇಮಂತ ಕುಮಾರ್, '1998ರ ನಂತರ 2021-22ನೇ ಸಾಲಿನಿಂದ ಮೈಸೂರು ವಿಶ್ವವಿದ್ಯಾಲಯದಲ್ಲಿ ಮತ್ತೆ ತಾಂತ್ರಿಕ ಕೋರ್ಸ್‌ಗಳು ಆರಂಭವಾಗುತ್ತಿವೆ. ವಿಶ್ವವಿದ್ಯಾಲಯದಲ್ಲಿ 'ಸ್ಕೂಲ್ ಆಫ್ ಎಂಜಿನಿಯರಿಂಗ್' ವಿಭಾಗವನ್ನು ಪ್ರಾರಂಭಿಸಲು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಅನುಮತಿ ನೀಡಿದೆ. ಅದರಲ್ಲಿ ಐದು ತಾಂತ್ರಿಕ ಕೋರ್ಸ್‌ಗಳಿರಲಿವೆ' ಎಂದು ಹೇಳಿದರು.

'ಸಿವಿಲ್ ಎನ್ವಿರಾನ್ಮೆಂಟಲ್ ಎಂಜಿನಿಯರಿಂಗ್, ಆರ್ಟಿಫಿಷಿಯಲ್ ಇಂಟಲಿಜೆನ್ಸ್ ಅಂಡ್ ಮೆಷಿನ್ ಲರ್ನಿಂಗ್, ಆರ್ಟಿಫಿಷಿಯಲ್ ಇಂಟಲಿಜೆನ್ಸ್ ಅಂಡ್ ಡೇಟಾ ಸೈನ್ಸ್, ಕಂಪ್ಯೂಟರ್ ಸೈನ್ಸ್ ಅಂಡ್ ಡಿಸೈನ್, ಬಯೊಮೆಡಿಕಲ್ ಅಂಡ್ ರೊಬೊಟಿಕ್ ಎಂಜಿನಿಯರಿಂಗ್ ಕೋರ್ಸ್‌ಗಳು ಆರಂಭವಾಗಲಿವೆ. ತಲಾ 60 ವಿದ್ಯಾರ್ಥಿಗಳಿಗೆ ಅವಕಾಶ. ಶೀಘ್ರ ಬೋಧಕ ಸಿಬ್ಬಂದಿಯನ್ನು ನೇಮಿಸಲಾಗುವುದು' ಎಂದರು.

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಅಧ್ಯಕ್ಷ ಪ್ರೊ.ಎಸ್.ಅಯ್ಯಪ್ಪನ್, ಕುಲಸಚಿವ ಪ್ರೊ.ಆರ್.ಶಿವಪ್ಪ ಇದ್ದರು.



ಪ್ಲೇಗ್, ಕಾಲರಾ, ಸ್ಪ್ಯಾನಿಷ್ ಫ್ಲೂ ಮನುಕುಲವನ್ನು ಕಾಡಿದ್ದರೂ ನಾಶಗೊಳಿಸಲಾಗಿಲ್ಲ. ಕೋವಿಡ್ ಕೂಡ ಹಾಗೇ. ಯಾರೂ ಧೈರ್ಯಗೆಡಬಾರದು

ಡಾ.ಸುಧಾಮೂರ್ತಿ
ಸಂಸ್ಥಾಪಕಿ, ಇನ್ಫೊಸಿಸ್ ಫೌಂಡೇಶನ್

The Times of Ina

(28-07-2021, Wed..... 04

# If no UoM, there would be no Infosys: Sudha

TIMES NEWS NETWORK



**Mysuru:** Infosys Foundation chairperson **Sudha Murty** observed that students should develop confidence and a good personality, which is the key for their success in life. Participating in the 105th Foundation Day of the University of Mysore (UoM) in virtual mode, she stated that if there was no UoM, there would be no Infosys, as this university gave them confidence and courage.

She stated that UoM played a crucial role in building a knowledge-based society in the country. "This university is the torchbearer for all. The Wadiyars of Mysuru will always be remembered for their contribution to society," she said.

"The university is instilling confidence in students apart from imparting them with knowledge. It is creating students with good character. This is important," she observed.

"There are thousands of universities across the world. Most students are facing challenges like fear and low levels of confidence. They are not ready to digest even small failures. We need to make our children more open minded to ensure that they will face challenges with confidence," she said. She also stated that there is a need to give more importance to yoga and sports in our education system.

S Ayyappan, chairman, Karnataka Science and Technology Academy and chancellor, Central Agricultural University, Imphal, said UoM is in the forefront of implementing the New Education Policy (NEP). "NEP will help students inculcate new skills and in their all-round development," he said.

Earlier, UoM vice-chancellor G Hemanth Kumar and registrar R Shivappa offered a floral tribute to erstwhile Mysuru ruler Nalwadi Krishnaraja Wadiyar, who founded the varsity.

Madhusudhan SR



**PAYING TRIBUTE:** UoM VC G Hemanth Kumar, registrar R Shivappa and others offer floral tribute to the portrait of Krishna Raja Wadiyar IV on the occasion of 105th foundation day of the varsity

The Times of Ina

28-07-2021, Wed...day

# If no UoM, there would be no Infosys: Sudha

TIMES NEWS NETWORK



**Mysuru:** Infosys Foundation chairperson **Sudha Murty** observed that students should develop confidence and a good personality, which is the key for their success in life. Participating in the 105th Foundation Day of the University of Mysore (UoM) in virtual mode, she stated that if there was no UoM, there would be no Infosys, as this university gave them confidence and courage.

She stated that UoM played a crucial role in building a knowledge-based society in the country. "This university is the torchbearer for all. The Wadiyars of Mysuru will always be remembered for their contribution to society," she said.

"The university is instilling confidence in students apart from imparting them with knowledge. It is creating students with good character. This is important," she observed.

Madhusudhan SR



**PAYING TRIBUTE:** UoM VC G Hemanth Kumar, registrar R Shivappa and others offer floral tribute to the portrait of Krishna Raja Wadiyar IV on the occasion of 105th foundation day of the varsity

"There are thousands of universities across the world. Most students are facing challenges like fear and low levels of confidence. They are not ready to digest even small failures. We need to make our children more open minded to ensure that they will face challenges with confidence," she said. She also stated that there is a need to give more importance to yoga and sports in our education system.

S Ayyappan, chairman, Karnataka Science and Technology Academy and chancellor, Central Agricultural University, Imphal, said UoM is in the forefront of implementing the New Education Policy (NEP). "NEP will help students inculcate new skills and in their all-round development," he said.

Earlier, UoM vice-chancellor G Hemanth Kumar and registrar R Shivappa offered a floral tribute to erstwhile Mysuru ruler Nalwadi Krishnaraja Wadiyar, who founded the varsity.

The Times of Ina
28-07-2021, Wed…day

# If no UoM, there would be no Infosys: Sudha

Times News Network



**Mysuru:** Infosys Foundation chairperson Sudha Murty observed that students should develop confidence and a good personality, which is the key for their success in life. Participating in the 105th Foundation Day of the University of Mysore (UoM) in virtual mode, she stated that if there was no UoM, there would be no Infosys, as this university gave them confidence and courage.

She stated that UoM played a crucial role in building a knowledge-based society in the country. "This university is the torchbearer for all. The Wadiyars of Mysuru will always be remembered for their contribution to society," she said.

"The university is instilling confi-

Madhusudhan SR



**PAYING TRIBUTE:** UoM VC G Hemanth Kumar, registrar R Shivappa and others offer floral tribute to the portrait of Krishna Raja Wadiyar IV on the occasion of 105th foundation day of the varsity

dence in students apart from imparting them with knowledge. It is creating students with good character. This is important," she observed.

"There are thousands of universities across the world. Most students are facing challenges like fear and low levels of confidence. They are not ready to digest even small failures. We need to make our children more open minded to ensure that they will face challenges with confidence," she said. She also stated that there is a need to give more importance to yoga and sports in our education system.

S Ayyappan, chairman, Karnataka Science and Technology Academy and chancellor, Central Agricultural University, Imphal, said UoM is in the forefront of implementing the New Education Policy (NEP). "NEP will help students inculcate new skills and in their all-round development," he said.


Earlier, UoM vice-chancellor G Hemanth Kumar and registrar R Shivappa offered a floral tribute to erstwhile Mysuru ruler Nalwadi Krishnaraja Wadiyar, who founded the varsity.

The Times of India

28-07-2021, Wednesday

# If no UoM, there would be no Infosys: Sudha

TIMES NEWS NETWORK



**Mysuru:** Infosys Foundation chairperson **Sudha Murty** observed that students should develop confidence and a good personality, which is the key for their success in life. Participating in the 105th Foundation Day of the University of Mysore (UoM) in virtual mode, she stated that if there was no UoM, there would be no Infosys, as this university gave them confidence and courage.

She stated that UoM played a crucial role in building a knowledge-based society in the country. "This university is the torchbearer for all. The Wadiyars of Mysuru will always be remembered for their contribution to society," she said.

"The university is instilling confidence in students apart from imparting them with knowledge. It is creating students with good character. This is important," she observed.



Madhusudhan SR

**PAYING TRIBUTE:** UoM VC G Hemanth Kumar, registrar R Shivappa and others offer floral tribute to the portrait of Krishna Raja Wadiyar IV on the occasion of 105th foundation day of the varsity

"There are thousands of universities across the world. Most students are facing challenges like fear and low levels of confidence. They are not ready to digest even small failures. We need to make our children more open minded to ensure that they will face challenges with confidence," she said. She also stated that there is a need to give more importance to yoga and sports in our education system.

S Ayyappan, chairman, Karnataka Science and Technology Academy and chancellor, Central Agricultural University, Imphal, said UoM is in the forefront of implementing the New Education Policy (NEP). "NEP will help students inculcate new skills and in their all-round development," he said.

Earlier, UoM vice-chancellor G Hemanth Kumar and registrar R Shivappa offered a floral tribute to erstwhile Mysuru ruler Nalwadi Krishnaraja Wadiyar, who founded the varsity.


The Times of Ina

28-07-2021, Wednesday

# If no UoM, there would be no Infosys: Sudha

TIMES NEWS NETWORK

Mysuru: Infosys Foundation chairperson Sudha Murty observed that students should develop confidence and a good personality, which is the key for their success in life. Participating in the 105th Foundation Day of the University of Mysore (UoM) in virtual mode, she stated that if there was no UoM, there would be no Infosys, as this university gave them confidence and courage.



She stated that UoM played a crucial role in building a knowledge-based society in the country. "This university is the torchbearer for all. The Wadiyars of Mysuru will always be remembered for their contribution to society," she said.

"The university is instilling confidence in students apart from imparting them with knowledge. It is creating students with good character. This is important," she observed.

Madhusudhan SR



**PAYING TRIBUTE:** UoM VC G Hemanth Kumar, registrar R Shivappa and others offer floral tribute to the portrait of Krishna Raja Wadiyar IV on the occasion of 105th foundation day of the varsity

"There are thousands of universities across the world. Most students are facing challenges like fear and low levels of confidence. They are not ready to digest even small failures. We need to make our children more open minded to ensure that they will face challenges with confidence," she said. She also stated that there is a need to give more importance to yoga and sports in our education system.

S Ayyappan, chairman, Karnataka Science and Technology Academy and chancellor, Central Agricultural University, Imphal, said UoM is in the forefront of implementing the New Education Policy (NEP). "NEP will help students inculcate new skills and in their all-round development," he said.

Earlier, UoM vice-chancellor G Hemanth Kumar and registrar R Shivappa offered a floral tribute to erstwhile Mysuru ruler Nalwadi Krishnaraja Wadiyar, who founded the varsity.